# ಪೇಟಿಎಂಗೆ ನಿರ್ಬಂಧ: ಚಿಂತೆಗಿಲ್ಲ ಆಸ್ಪದ

ಶಶಿಕುಮಾರ್ ಸಿ.




ನಿಯಮ ಉಲ್ಲಂಘನೆ ಆರೋಪದಡಿ ಫೆಬ್ರುವರಿ 19ರವರೆಗೆ ಪೇಟಿಎಂನ ಕೆಲವು ವಹಿವಾಟುಗಳಿಗೆ ಆರ್‌ಬಿಐ ನಿರ್ಬಂಧ ಹೇರಿದೆ. ಬಳಕೆದಾರರಿಂದ ಪ್ರಿಪೇಡ್ ಪೇಮೆಂಟ್, ವಾಲೆಟ್ ಮತ್ತು ಫಾಸ್‌ಟ್ಯಾಗ್‌ಗಳಿಗೆ ಯಾವುದೇ ಠೇವಣಿ ಅಥವಾ ಟಾಪ್–ಅಪ್ ಪಡೆಯದಂತೆಯೂ ಆದೇಶ ಹೊರಡಿಸಿದೆ.

ನಿಯಮ ಉಲ್ಲಂಘನೆ ಮಾಡಿರುವ ಕುರಿತು ಪೇಟಿಎಂ ಪೇಮೆಂಟ್ ಬ್ಯಾಂಕ್ ಲಿಮಿಟೆಡ್ (PPBL) ವಿರುದ್ಧ ರಿಸರ್ವ್ ಬ್ಯಾಂಕ್ ಸಮಗ್ರ ವ್ಯವಸ್ಥೆಯ ಲೆಕ್ಕಪರಿಶೋಧಕರ ವರದಿ ಮತ್ತು ಬಾಹ್ಯ ಲೆಕ್ಕಪರಿಶೋಧಕರ ಮೌಲ್ಯಮಾಪನಾ ವರದಿ ನೀಡಿತ್ತು. ಆ ವರದಿ ಆಧರಿಸಿ ಕ್ರಮ ಕೈಗೊಂಡಿದೆ.




ಆದೇಶದನ್ವಯ, ಠೇವಣಿ, ಕ್ರೆಡಿಟ್ ವ್ಯವಹಾರ ಅಥವಾ ಟಾಪ್–ಅಪ್‌ಗಳನ್ನು ಯಾವುದೇ ಗ್ರಾಹಕರ ಖಾತೆಗಳಿಂದ ಪಡೆಯುವಂತಿಲ್ಲ. ಪ್ರಿಪೇಡ್, ವಾಲೆಟ್, ಫಾಸ್‌ಟ್ಯಾಗ್, ಎನ್‌ಸಿಎಮ್‌ಸಿ ಕಾರ್ಡ್‌ಗಳನ್ನೂ ನೀಡುವಂತಿಲ್ಲ. ಇದನ್ನು ಹೊರತುಪಡಿಸಿ ಬಡ್ಡಿ ಹಣ, ಮರುಪಾವತಿ ಮಾಡಬಹುದು. ಉಳಿತಾಯ ಖಾತೆ, ಚಾಲ್ತಿ ಖಾತೆ, ಪ್ರಿಪೇಡ್ ಪಾವತಿ, ಫಾಸ್‌ಟ್ಯಾಗ್, ಎನ್‌ಸಿಎಮ್‌ಸಿ ಮೂಲಕ ಹಣ ತೆಗೆಯಲು ಯಾವುದೇ ನಿರ್ಬಂಧ ಇರುವುದಿಲ್ಲ. ಗ್ರಾಹಕ ತನ್ನ ಖಾತೆಯಿಂದ ಹಣ ಪಡೆಯಬಹುದು.

## ನಿರ್ಬಂಧಕ್ಕೆ ಕಾರಣ?

ಬಾಹ್ಯ ಆಡಿಟರ್‌ಗಳು ನಡೆಸಿದ ಪರಿಶೀಲನೆ ವೇಳೆ 'ಪೇಟಿಎಂ ಪೇಮೆಂಟ್ಸ್ ಬ್ಯಾಂಕ್'ನಿಂದ ಕೆಲವು ನಿಯಮಗಳ ಉಲ್ಲಂಘನೆಗಳಾಗಿರುವುದು ಕಂಡುಬಂದಿದೆ. ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆಯ ಸೆಕ್ಷನ್ 35ಎ ಅಡಿಯಲ್ಲಿ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ಆರ್‌ಬಿಐ ಕ್ರಮ ಕೈಗೊಂಡಿದೆ.

## ಫಾಸ್‌ಟ್ಯಾಗ್, ವಾಲೆಟ್ ಬಳಸಬಹುದೇ?

ಬಳಕೆದಾರರು ಪೇಟಿಎಂ ವಾಲೆಟ್‌ಗೆ ಹಾಗೂ ಫಾಸ್‌ಟ್ಯಾಗ್‌ಗೆ ಹಾಗೂ ಟ್ರಾನ್ಸಿಟ್ ಕಾರ್ಡ್‌ಗಳಿಗೆ ರೀಚಾರ್ಜ್, ಟಾಪ್–ಅಪ್ ಮಾಡಿರುತ್ತಾರೆ. ಆರ್‌ಬಿಐ ನಿರ್ಬಂಧದಿಂದಾಗಿ ರೀಚಾರ್ಜ್, ಟಾಪ್–ಅಪ್ ಮಾಡಿದ ಹಣ ಕಳೆದುಕೊಳ್ಳುವ ಆತಂಕದಲ್ಲಿರುವ ಬಳಕೆದಾರರು ಆ ಬಗ್ಗೆ ಚಿಂತೆ ಪಡಬೇಕಿಲ್ಲ. ಈ ಪ್ರಿಪೇಡ್ ಇನ್‌ಸ್ಟ್ರುಮೆಂಟ್‌ಗಳಲ್ಲಿ ಇರುವ ಹಣ ಎಲ್ಲಿಯೂ ಹೋಗದು. ಆರ್‌ಬಿಐ ನಿರ್ಬಂಧದ ಪ್ರಕಾರ ಫೆಬ್ರುವರಿ 29ರವರೆಗೆ ಇವುಗಳಿಗೆ ಹಣ ತುಂಬಿಸಬಹುದು. ಅದಾದ ಬಳಿಕ ಸಾಧ್ಯವಾಗದು.

## ಆ್ಯಪ್‌ಗೂ ನಿರ್ಬಂಧಕ್ಕೂ ಸಂಬಂಧ ಇಲ್ಲ

ಆರ್‌ಬಿಐನ ನಿರ್ಬಂಧವು ಪೇಟಿಎಂನ ಪೇಮೆಂಟ್ಸ್ ಬ್ಯಾಂಕ್‌ಗೆ ಮಾತ್ರ ಅನ್ವಯವಾಗುತ್ತದೆ. ಅದಕ್ಕೂ ಪೇಟಿಎಂ ಆ್ಯಪ್‌ಗೆ ಸಂಬಂಧವಿಲ್ಲ. ಪೇಟಿಎಂ ಆ್ಯಪ್‌ನಲ್ಲಿರುವ ಬೇರೆಲ್ಲಾ ಯುಪಿಐ ವಹಿವಾಟು ಸೇವೆಗಳನ್ನು ಬಳಸಬಹುದು. ಪೇಟಿಎಂ ಸ್ಕ್ಯಾನ್ ಮಾಡಿ ಹಣ ಪಾವತಿಸಬಹುದು. ವಿದ್ಯುತ್, ನೀರು ಇತ್ಯಾದಿ ಬಿಲ್‌ಗಳನ್ನು ಪಾವತಿಸಬಹುದು.

ಪೇಟಿಎಂ ಆ್ಯಪ್‌ನಲ್ಲಿ ಕೇವಲ ಯುಪಿಐ ವಹಿವಾಟು ಮಾತ್ರವಲ್ಲ, ಸಾಕಷ್ಟು ಸೇವೆಗಳು ಲಭ್ಯ ಇವೆ. ಷೇರು ಮತ್ತು ಮ್ಯೂಚುವಲ್ ಫಂಡ್ ವಹಿವಾಟು, ಟಿಕೆಟ್ ಬುಕಿಂಗ್, ಒನ್ ಎನ್‌ಡಿಸಿ ಪ್ಲಾಟ್‌ಫಾರ್ಮ್, ಪೇಟಿಎಂ ಹೆಲ್ತ್, ಪೇಟಿಎಂ ಫಾಸ್‌ಟ್ಯಾಗ್ ಇತ್ಯಾದಿ ಸೇವೆಗಳಿವೆ. ಆದರೆ, ಆರ್‌ಬಿಐ ನಿರ್ಬಂಧ ಹಾಕಿರುವುದು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಮಾತ್ರ. ಫಾಸ್‌ಟ್ಯಾಗ್, ವಾಲೆಟ್ ಇತ್ಯಾದಿಯಲ್ಲಿ ನಿಮ್ಮ ಹಣ ಇದ್ದರೆ ತೊಂದರೆಯಿಲ್ಲ, ಚಿಂತೆ ಬೇಕಿಲ್ಲ.




## ಎಕ್ಸ್‌ನಲ್ಲಿ ಪೇಟಿಎಂ ಪತ್ರ

'ನೀವು ಪೇಟಿಎಂ ಫಾಸ್‌ಟ್ಯಾಗ್‌ನಲ್ಲಿ ಹಣ ಇದ್ದರೆ ಅದರ ಬಳಕೆಯನ್ನು ಮುಂದುವರಿಸಬಹುದು. ಕಳೆದ ಎರಡು ವರ್ಷಗಳಲ್ಲಿ ಇತರ ಬ್ಯಾಂಕುಗಳೊಂದಿಗೆ ನಮ್ಮ ಪ್ರಯಾಣ ಆರಂಭಿಸಿದ್ದೆವು. ಈಗ ಆ ಪ್ರಕ್ರಿಯೆಯನ್ನು ಚುರುಕುಗೊಳಿಸುತ್ತೇವೆ' ಎಂದು ಪೇಟಿಎಂ ತನ್ನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಖಾತೆಯಲ್ಲಿ ಹಣ ಹೊಂದಿದ್ದರೆ ಗ್ರಾಹಕರು ಚಿಂತೆ ಮಾಡಬೇಕಿಲ್ಲ. ಹೊಸದಾಗಿ ಅಕೌಂಟ್‌ಗೆ ಠೇವಣಿ ಹಾಕುವ ಬದಲು, ಇರುವ ಹಣವನ್ನು ಬಳಕೆ ಮಾಡಬಹುದು ಅಥವಾ ಬೇರೆ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಬಹುದು. ನಿಮ್ಮ ಹಣಕ್ಕೆ ಯಾವುದೇ ರೀತಿಯ ತೊಂದರೆಯಾಗದು.